ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 24.03.2026
ಮುಖ್ಯವಿಚಾರಣೆ ಶ್ರೀ ಎಸ ಎಲ್ ಪಿ  ವಕೀಲರಿಂದಃ ವಾದಿಯ ಪರವಾಗಿ

ನಾನು ವಾದಿ ಇದ್ದು ನನ್ನ ಮುಖ್ಯ ಸಾಕ್ಷಿಗೆ ಅನುಗುಣವಾಗಿ ನ್ಯಾಯಾಲಯಕ್ಕೆ ಈಗ ನನ್ನ ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯವಿರುತ್ತವೆ.

ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಃ

1) ವಂಶವೃಕ್ಷದ ದೃಡಿಕರಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ-1 ಎಂದು ,

2) ಹಕ್ಕು ಬದಲಾವಣೆ ವಹಿಗಳ ದೃಡಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

3) ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-4 ರಿಂದ 8 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ  ಎಸ ಎನ ಎನ ವಕೀಲರಿಂದ ಃ

ಹೊಳಿಯವ್ವಳಿಗೆ ನನ್ನ ತಂದೆ ಒಬ್ಬನೆ ಮಗ ಇರುತ್ತಾರೆ. ನನ್ನ ತಂದೆ ಪರಮೇಶಪ್ಪರವರಿಗೆ ನಾನು ಒಬ್ಬಳೆ ಮಗಳು ಇರುತ್ತೇನೆ. ನನಗೆ 4 ಜನ ಮಕ್ಕಳು ಇರುತ್ತಾರೆ. ದಾವಾ ಸ್ವತ್ತುಗಳು ಪರಮೇಶಪ್ಪರವರಿಗೆ ನನ್ನ ಅಜ್ಜಿಯಿಂದ ಬಂದಿರುತ್ತದೆ. ನಿಪಿ-1 ವಂಶಾವಳಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆಗೆ ನನ್ನ ಅಜ್ಜಿ ಹೊಳಿಯವ್ವಳಿಂದ ಬಂದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಕುರಿತು ಯಾವುದೆ ಮಾಹಿತಿ ಇಲ್ಲದೆ ಇದ್ದರು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಕುಷ್ಟಗಿ